ಯಕ್ಷಗಾನ ಪ್ರಸಂಗ

ಆದಿಕವಿ ವಾಲ್ಮೀಕಿ

ಕವಿ

ಅಮೃತ ಸೋಮೇಶ್ವರ

ಅಂತರಜಾಲ ಆವೃತ್ತಿ ಪ್ರಕಾಶಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.com

ಆವೃತ್ತಿ ೧.೦ ಜನವರಿ ೨೬, ೨೦೨೦

Email: yakshaprasangakosha@gmail.com, yakshavahini@gmail.com Blog: www.yakshaprasangakosha.com

ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

ಗೌರವಾನ್ವಿತ ಸಂಪಾದಕ ಮಂಡಳಿ:

ಶ್ರೀಧರ ಡಿ. ಎಸ್ (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

ಗೌರವಾನ್ವಿತ ಸಲಹಾ ಮಂಡಳಿ:

ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

ಕಾರ್ಯಕಾರಿ ಮಂಡಳಿ:

ರವಿ ಮಡೋಡಿ (ಯೋಜನಾಧ್ಯಕ್ಷ), ಡಾ. ಪ್ರದೀಪ ಸಾಮಗ (ಯೋಜನಾ ಕಾರ್ಯದರ್ಶಿ), ನಟರಾಜ ಉಪಾಧ್ಯ (ಯೋಜನಾ ಸಹಕಾರ್ಯದರ್ಶಿ), ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಅಶ್ವಿನಿ ಹೊದಲ, ಪಟ್ಲಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

ಗೌರವಾನ್ವಿತ ಸ್ವಯಂಸೇವಕರು:

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

ಸಹಕಾರ:

ಪ್ರಸಂಗ ಕವಿಗಳು:

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಲಾಜೆ ಗಣೇಶ ಭಟ್

ಕವಿಚರಿತ್ರೆ ಮತ್ತು ಪ್ರಸಂಗಯಾದಿ:

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

ಸಂಸ್ಥೆಗಳು:

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

ಯಕ್ಷವಾಹಿನಿ ಸಂಸ್ಥೆ

ಗೌರವಾನ್ವಿತ ಸಲಹಾ ಮಂಡಳಿ:

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಪಾಠಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

ಆರ್ಥಿಕ ಸಹಾಯ:

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

ಪುಸ್ತಕ ಸಹಾಯ:

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.

ಶ್ರೀಧರ ಡಿ. ಎಸ್.
ಪ್ರಧಾನ ಸಂಪಾದಕರು

ಗಿಂಡೀಮನೆ ಮೃತ್ಯುಂಜಯ
ಸಹ ಸಂಪಾದಕರು

ರವಿ ಮಡೋಡಿ
ಯೋಜನಾಧ್ಯಕ್ಷರು

ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು

ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ

ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ

ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ

ಸಾರಾಂಶ

ಪ್ರಸಂಗ ವಿಧ:
ಪೌರಾಣಿಕ

ಆಧಾರ ಗ್ರಂಥ:
ರಾಮಾಯಣ

ಭಾಷೆ:
ಕನ್ನಡ

ಹಿಂದಿನ ಪ್ರಕಾಶನಗಳ ವಿವರ:
ಶ್ರೀ ಸೋಮೇಶ್ವರರ ಯಕ್ಷಗಾನ ಕೃತಿ ಪ್ರಕಾಶನ ಸಮಿತಿ ಮಂಗಳೂರು ಇವರಿಂದ ೧೯೯೦ರಲ್ಲಿ ಪ್ರಕಟಿತ ಯಕ್ಷಗಾನ ಕೃತಿ ಸಂಪುಟ

ಹಕ್ಕುಸ್ವಾಮ್ಯ ವಿವರ:
ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

ಒಟ್ಟು ಪದ್ಯಗಳು:
೧೨೪

ಪಾತ್ರಗಳು:
ಪ್ರಚೇತಸ, ಪರಮೇಶ್ವರ, ಚಂದ್ರದೇವ, ಮಾರಿಷೆ, ಚಿತ್ರಶಿಖಿ (ಕಿರಾತ ನಾಯಕ), ಚಿತ್ರಿಣಿ (ಚಿತ್ರಶಿಖಿನ ಹೆಂಡತಿ), ದಮನ (ಚಿತ್ರಶಿಖಿನ ಪಾಲಿತ ಪುತ್ರ), ಮುಕ್ತಿ (ದಮನನ ಹೆಂಡತಿ), ವನದೇವಿ, ನಾರದ, ವಾಲ್ಮೀಕಿ, ಬ್ರಹ್ಮ, ಭರದ್ವಾಜ (ವಾಲ್ಮೀಕಿ ಶಿಷ್ಯ), ಬೇಡ, ಬೇಡರ ಗುಂಪು, ಶ್ಯೇನ ಪಕ್ಷಿ, ಕ್ರೌಂಚ ಪಕ್ಷಿಗಳು, ವನ್ಯಮೃಗಗಳು, ದಾರಿಹೋಕರು

ಕಥಾ ಸಾರಾಂಶ:
ಪ್ರಾಚೀನಬರ್ಹಿಯ ಪುತ್ರ ಪ್ರಚೇತಸನು ಪ್ರಜಾಪತಿ ಪಟ್ಟವನ್ನು ಪಡೆಯುವ ಸಲುವಾಗಿ ಶಿವನ ಕುರಿತು ತಪಸ್ಸು ಮಾಡುತ್ತಾನೆ. ಶಿವನು ಪ್ರತ್ಯಕ್ಷನಾಗಿ ಪ್ರಚೇತಸನ ಮಗನಿಗೆ ಪ್ರಜಾಪತಿಯೋಗ ಪ್ರಾಪ್ತವಾಗುವುದಾಗಿ ತಿಳಿಯಪಡಿಸುತ್ತಾನೆ. ಪ್ರಚೇತಸನು ಸ್ವಚ್ಛಂದವಾಗಿ ಬೆಳೆದಿದ್ದ ಕಾಡನ್ನು ನಿರ್ನಾಮ ಮಾಡಲು ತೊಡಗಿದಾಗ ವನದೇವಿ ಆತನೊಡನೆ ಇದು ಸಲ್ಲದ ಕಾರ್ಯವೆನ್ನುತ್ತಾಳೆ. ಆ ಮಾತನ್ನು ಪ್ರಚೇತಸ ತಿರಸ್ಕರಿಸಲು, ಓಷಧೀಶನಾದ ಚಂದ್ರದೇವನು ಬಂದು ಅವನ ಕೃತ್ಯವನ್ನು ಆಕ್ಷೇಪಿಸುತ್ತಾನೆ. ಪ್ರಚೇತಸನು ಒಡಂಬಡದಿರಲು, ವೃಕ್ಷಸೇನೆಯೂ ತನ್ನ ಪಾಲಿತಪುತ್ರಿಯೂ ಆದ ಮಾರಿಷೆಯನ್ನು ಪ್ರಚೇತಸನಿಗೆ ಲಗ್ನ ಮಾಡಿಕೊಡುತ್ತಾನೆ. ಪ್ರಚೇತಸನು ವೃಕ್ಷಹನನವನ್ನು ನಿಲ್ಲಿಸಿ ಮಾರಿಷೆಯೊಡನೆ ಸಂಸಾರವನ್ನು ಸಾಗಿಸುತ್ತಾನೆ.

ಮಾರಿಷೆ ಅವಳಿ ಗಂಡು ಶಿಶುಗಳನ್ನು ಪಡೆಯುತ್ತಾಳೆ. ಅವುಗಳಲ್ಲಿ ಒಂದನ್ನು ಶ್ಯೇನ ಪಕ್ಷಿಯೊಂದು ಎತ್ತಿಕೊಂಡೊಯ್ಯುತ್ತದೆ. ಆ ಪಕ್ಷಿಯ ಬಾಯಿಯಿಂದ ಆ ಶಿಶು ಚಿತ್ರಶಿಖಿನೆಂಬ ಕಿರಾತ ನಾಯಕನಿಗೆ ದೊರಕುತ್ತದೆ. ದಮನನೆಂದು ಹೆಸರಿರಿಸಿ ಸಾಕುತ್ತಾನೆ. ಹುಡುಗ ಬೆಳೆದಾಗ, ದಾರಿಹೋಕರನ್ನು ದೋಚುವ ತನ್ನ ಕಸುಬನ್ನು ಚಿತ್ರಶಿಖಿನು ದಮನನಿಗೆ ಹೇಳಿಕೊಡುತ್ತಾನೆ.

ಒಮ್ಮೆ ದಾರಿಹೋಕನಾದ ನಾರದನನ್ನು ದಮನ ಆಕ್ರಮಿಸಿದಾಗ, ಈ ಪಾಪಕೃತ್ಯದ ಫಲದಲ್ಲಿ ಅವನ ಹೆಂಡತಿ ಮಕ್ಕಳು ಪಾಲು ಪಡೆಯುತ್ತಾರೆಯೇ ಎಂಬುದನ್ನು ಕೇಳಿಬರುವಂತೆ ಸೂಚಿಸಿದಾಗ ಅದರಂತೆ ದಮನ ಹೋಗಿ ತನ್ನ ಹೆಂಡತಿಯೊಡನೆ ವಿಚಾರಿಸುತ್ತಾನೆ. ಆಕೆ ಪಾಪದ ಫಲವನ್ನು ಹೊಂದಲು ಸಿದ್ಧಳಾಗದೆ ಇದ್ದುದರಿಂದ ದಮನನು ಸಂಸಾರದ ಭ್ರಮೆಯನ್ನು ಉಳಿದು ನಾರದನೊಡನೆ ಜ್ಞಾನದ ದಾರಿಯನ್ನು ವಿಚಾರಿಸುತ್ತಾನೆ. ನಾರದನು ಆತನಿಗೆ ರಾಮಮಂತ್ರವನ್ನು ಉಪದೇಶಿಸುತ್ತಾನೆ. ದಮನನು ತಪೋಮಗ್ನನಾಗುತ್ತಾನೆ. ಅವನ ಸುತ್ತಲೂ ಹುತ್ತ ಬೆಳೆಯುತ್ತದೆ. ಹಲವು ಕಾಲಾನಂತರ ನಾರದನು ಅದೇ ದಾರಿಯಲ್ಲಿ ಬರುತ್ತಾ ದಮನನ ತಪೋಸಿದ್ಧಿಯನ್ನು ಮನಗಂಡು, ಅವನನ್ನು ಬಹಿರ್ಮುಖನಾಗುವಂತೆ

ಆದೇಶಿಸುತ್ತಾನೆ. ಮಳೆ ಸುರಿದು, ಹುತ್ತ ಕರಗಿ ತಪಸ್ವಿ ಪ್ರಕಟವಾಗುತ್ತಾನೆ. ವಲ್ಮೀಕದಿಂದ ಹೊರಬಂದುದರಿಂದ ವಾಲ್ಮೀಕಿಯೆನಿಸುತ್ತಾನೆ. ಆತನಿಗೆ ಋಷಿತ್ವ ಸಿದ್ಧಿಸಿದುದಾಗಿಯೂ, ಶ್ರೀರಾಮನ ದಿವ್ಯ ಕಥೆಯನ್ನು ಕಾವ್ಯರೂಪದಲ್ಲಿ ರಚಿಸಬೇಕೆಂದೂ, ಬರೆಯುವ ರೀತಿ ಮುಂದೆ ಸ್ಫುರಿಸುವುದೆಂದೂ ನಾರದ ನುಡಿಯುತ್ತಾನೆ.

ಒಮ್ಮೆ ಶಿಷ್ಯನೊಂದಿಗೆ ತಮಸಾ ತೀರದಲ್ಲಿ ಸಂಚರಿಸುವಾಗ, ಬೇಡನೊಬ್ಬನು ಕ್ರೌಂಚ ಮಿಥುನದಲ್ಲಿ ಒಂದನ್ನು ಬಾಣ ಹೊಡೆದು ಬೀಳಿಸಿದುದನ್ನು ನೋಡಿದ ವಾಲ್ಮೀಕಿಯ ಮನಸ್ಸು ಕರಗುತ್ತದೆ. ಅವನ ಬಾಯಿಯಿಂದ ಬೇಡನ ಕುರಿತು ಹೊಮ್ಮಿದ ಶಾಪವಾಕ್ಯವು ಆಯಾಚಿತವಾಗಿ ಶ್ಲೋಕ ರೂಪವನ್ನು ತಳೆಯುತ್ತದೆ. ವಾಲ್ಮೀಕಿ ಬೆರಗಾಗಿರಲು ಬ್ರಹ್ಮದೇವನೇ ಮೈದೋರಿ ವಾಲ್ಮೀಕಿಗೆ ಛಂದೋದರ್ಶನವಾಗಿದೆಯೆಂದೂ ಶ್ಲೋಕರೂಪದಲ್ಲಿ ಶ್ರೀರಾಮ ಕಥೆಯನ್ನು ರಚಿಸಬೇಕೆಂದೂ ಅದು ಅಜರಾಮರವಾಗುವುದೆಂದೂ ಹರಸುತ್ತಾನೆ. ವಾಲ್ಮೀಕಿ ತನ್ನ ಒಳಗಣ್ಣಿಗೆ ಗೋಚರಿಸಿದಂತೆ ರಾಮಾಯಣವನ್ನು ರಮಣೀಯ ಮಹಾಕಾವ್ಯವಾಗಿ ರಚಿಸಿ ಆದಿಕವಿಯೆನಿಸುತ್ತಾನೆ.

ಕವಿ ಪರಿಚಯ : (ಆಧಾರ: ಕರ್ನಾಟಕ ಯಕ್ಷಗಾನ ಚರಿತ್ರೆ - ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)

ಡಾ. ಅಮೃತ ಸೋಮೇಶ್ವರರವರು ೧೯೩೫ರಲ್ಲಿ ಮಂಗಳೂರು ಸಮೀಪದ ಕೋಟೆಕಾರು ಗ್ರಾಮದ ಅಡ್ಕದಲ್ಲಿ ಜನಿಸಿದರು. ತಂದೆ ಚಿರಿಯಂಡ, ತಾಯಿ ಅಮುಣಿ. ಅಮೃತ ಸೋಮೇಶ್ವರ ತುಳುನಾಡಿನ ಒರ್ವ ಸಾಹಿತಿ, ಹಿರಿಯ ಜಾನಪದ ವಿದ್ವಾಂಸ, ಕಾವ್ಯ, ಸಣ್ಣಕತೆ, ನಾಟಕ, ಯಕ್ಷಗಾನ, ವಿಮರ್ಶೆ ಮತ್ತು ಜಾನಪದ ಕ್ಷೇತ್ರದಲ್ಲಿ ವಿಶೇಷವಾಗಿ ಕೆಲಸ ಮಾಡಿದವರು. ವೃತ್ತಿಯಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದಾರೆ. ಅಖಿಲ ಭಾರತ ತುಳು ಸಮ್ಮೇಳನದ ಅಧ್ಯಕ್ಷತೆ, ರಾಜ್ಯೋತ್ಸವ ಪ್ರಶಸ್ತಿ, ಮಂಗಳೂರು ವಿಶ್ವವಿದ್ಯಾಲಯದ ಡಾಕ್ಟರೇಟ್ ಪದವಿ, ಪಾರ್ತಿಸುಬ್ಬ ಪ್ರಶಸ್ತಿ ಮುಂತಾದ ಗೌರವಗಳಿಗೆ ಭಾಜನರು. ಎಲೆಗಿಳಿ, ರುದ್ರಶಿಲೆಸಾಕ್ಷಿ, ವನಮಾಲೆ, ಭ್ರಮಣ, ಉಪ್ಪುಗಾಳಿ, ಯಕ್ಷಾಂದೋಳ, ಬಾಮಕುಮಾರ ಸಂಧಿ, ಕಾಲೆವಾಲ, ಅಪಾರ್ಥಿನಿ ಮುಂತಾದ ಹಲವು ಸಾಹಿತ್ಯಕೃತಿಗಳ ಕರ್ತೃ. ತುಳು ನಿಘಂಟು ಯೋಜನೆಯ ಸಲಹಾ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಇವರು ಬರೆದ ಪ್ರಸಂಗಗಳು: ಅಮರಶಿಲ್ಪಿ ವೀರಕಲ್ಕುಡ, ಸಹಸ್ರಕವಚಮೋಕ್ಷ, ಕಾಯಕಲ್ಪ, ಪುತ್ತೂರಮುತ್ತು, ಅಮರವಾಹಿನಿ, ತ್ರಿಪುರ ಮಥನ, ಮಹಾಕಲಿ ಮಗಧೇಂದ್ರ, ವಂಶವಾಹಿನಿ, ಮಹಾಶೂರ ಭೌಮಾಸುರ, ಚಕ್ರವರ್ತಿ ದಶರಥ, ಚಂದ್ರಮತೀಸ್ವಯಂವರ, ವರುಣಯಾಗ, ಸಾರ್ವಭೌಮ ಸಹಸ್ರಾನೀಕ, ಚಾಲುಕ್ಯ ಚಕ್ರೇಶ್ವರ, ಅಂಧಕಮೋಕ್ಷ, ಘೋರ ಮಾರಕ, ಮಾರಿಷಾಕಲ್ಯಾಣ, ಅಂಗುಲಿಮಾಲಾ, ಅಮರವೀರದ್ವಯ ಕೋಟಿಚೆನ್ನಯ, ಅರುಣ ಸಾರಥ್ಯ, ಋಷ್ಯಶೃಂಗ, ತನಿಯ – ಗುರುವರ ಕಾಳಗ, ಪ್ರಜ್ಞಾವಿಜಯ, ಭುವನಭಾಗ್ಯ, ಮದಿರಾಸುರ ಮರ್ದನ, ಮಿತ್ರಭೇದ, ವಿದ್ಯಾವಿಜಯ, ಶ್ರೀದೇವಿಭಗವತಿ, ಸಂಗ್ಯಾ ಬಾಳ್ಯಾ, ಸತ್ಯನಾಪುರದ ಸಿರಿ, ಸಿರಿರಾಮ ಪಾದುಕೆ.

ಟಿಪ್ಪಣಿ :

ಪ್ರಸಂಗ ಸಾಹಿತ್ಯ

ಭಾಮಿನಿ
ಎಲ್ಲೊ ಮಾನಸಲೋಕದೊಂದೆಡೆ |
ಯಲ್ಲಿ ಮರೆಯಾಗಿರ್ದ ಜೀವನ |
ದಲ್ಲಿ ಯೋಗಾಯೋಗ ಸಂಭವ ಘಟಿಸಲಾಕ್ಷಣದಿ ||
ಝಲ್ಲನೆಯೆ ತಾ ಮಿಂಚಿ ತನ್ನೊಳ |
ಗುಳ್ಳ ಸತ್ತ್ವವ ಬೆಳಗಿ ತೋರಿಪ |
ಸಲ್ಲಲಿತ ನವಸೃಷ್ಟಿಕಾರಕ ಪ್ರತಿಭೆ ನಿನಗೆ ನಮೋ || 1 ||

ಭೈರವಿ - ಝಂಪೆ
ಪ್ರಾಚೀನಬರ್ಹಿಸುತನಾದ ಪ್ರಚೇತಸನು |
ಆಚಾರ್ಯ ತಾನೆನಿಸಿ ಯೋಚನೆಯ ಗೈದ ||1||

ಎಲ್ಲರಂತೀಲೋಕದಲ್ಲಿ ಬಾಳುವುದೆ ವ್ಯರ್ಥ |
ಸಲ್ಲದದು ಬಾಳ್ವೆಯಲಿ ಬಲ್ಲಿದಗೆ ಕೀರ್ತಿ ||2||

ಪದುಮಜಂ ಪಲರಿಂಗೆ ಪದವಿಗಳನೊಲಿದಿತ್ತ |
ನೊದಗಿತಿಲ್ಲೆನಗೆ ಯೋಗ್ಯದ ಪದವಿಯೊಂದು ||3||

ವಿದಿತ ಪ್ರಜಾಪತಿತ್ವದ ಮಹಾಪಟ್ಟವನು |
ವಿಧಿ ನೀಡದದ ಪಡೆವೆ ಮದನಹರನಿಂದ ||4||

ಎಂದಾ ಪ್ರಚೇತಸನು ದಂಡಕಾರಣ್ಯದಲಿ |
ಇಂದುಧರನನೆ ನೆನೆದು ನಿಂದ ತಪದೊಳಗೆ ||5|| 6 ||

ಕಲ್ಯಾಣಿ – ಅಷ್ಟ
ಜಯ ನಮೋ ಜಗದೀಶ್ವರ | ಗಂಗಾಧರ |
ಜಯ ನಮೋ ಜಗದಾಧಾರ ||
ಜಯ ನಮೋ ಶಂಕರ ಶಿಖಿನೇತ್ರ ಫಣಿಧರ |
ಭಯನಿವಾರಣ ಭಸಿತಾಂಗ ದಯಾಘನ ||1 || 7 ||

ಕಂದ
ಅಚಲ ತಪೋಮಗ್ನತೆಯೊಳ್ |
ಪ್ರಚೇತಸನು ಕಾಯಖಂಡನವಗೈಯುತಿರಲ್ ||
ವಿಚಾರಿಸುವೆನೆಂದಭವಂ |
ಅಚಲವನುಳಿದಾ ತಪಸ್ವಿಯೆಡೆಗೈತಂದಂ ||1|| 8 ||

ಸಾಂಗತ್ಯ – ರೂಪಕ
ಭಳಿರೆ ಪ್ರಚೇತಸ ತವ ನಿಶ್ಚಲ ತಪ |
ಕೊಲಿದು ನಾ ಬಂದೆ ನಿನ್ನೆಡೆಗೆ ||
ಒಲವರವೇನು ನೀ ಪೇಳು ವರವನೀವೆ |
ಬಳಲಿದೆ ಸಾಕೇಳು ವತ್ಸ || 1|| 9 ||

ಕೇದಾರಗೌಳ – ಅಷ್ಟ
ದೇವ ನಾ ಧನ್ಯನಾದೆನು ತಪದಂತ |
ಭಾರ್ಗವನ ನೀನರಿವೆ ||
ಈ ವಿಶ್ವದೊಳು ಪ್ರಜಾಪತಿಯಾಗಿ ಮೆರೆವ ಮ |
ಹಾವರವನುಗ್ರಹಿಸು ||1|| 10 ||

ಸಾಂಗತ್ಯ – ರೂಪಕ
ಎಣಿಕೆಯನರಿತೆನು ನಿನಗೆ ಪ್ರಜಾಪತಿ |
ಘನ ಪದವಿಯ ಯೋಗವಿಲ್ಲ ||
ಇನಿತು ತಪವು ವ್ಯರ್ಥವಲ್ಲ ಮುಂದಕೆ ನಿನ್ನ |
ತನಯ ಪ್ರಜಾಪತಿಯಹನು ||1 || 11 ||

ಕೇದಾರಗೌಳ – ಅಷ್ಟ
ಆಗಲಿ ಜಾತಗಾದರು ಪ್ರಜಾಪತಿಯೊಂದು |
ಯೋಗವನಿತ್ತೆಯಲ ||
ನೀಗಿತು ವ್ಯಥೆಯೆಂದು ಭೋಗಿಭೂಷಣನಿಂಗೆ |
ಬಾಗಿ ವಂದನೆಗೈದನು || 1 || 12 ||

ಸೌರಾಷ್ಟ್ರ – ತ್ರಿವುಡೆ
ವರವನಿತ್ತಾ ಹರನು ತಾ ಮೈ |
ಗರೆಯಲಾಗ ಪ್ರಚೇತಸನು ಬಲು |
ಹರುಷದಲಿ ತಾನಿರ್ದ ಮುಂದಿನ | ಪರಿಯ ನೆನೆದು ||1||

ಒಂದು ದಿನ ಯೋಚಿಸಿದನಿದೊ ಸ್ವ |
ಚ್ಛಂದದಲಿ ನಾಲ್ದೆಸೆಯ ಹಬ್ಬಿಹು |
ದಿಂದು ಭೀಕರ ಕಾನನವು ಜಗ | ದಂದ ಕೆಡಿಸಿ ||2||

ಕಾರಕತ್ತಲೆ ಕವಿದ ಕಾಡಲಿ |
ಕ್ರೂರಮೃಗಗಳು ಘೋರದೈತ್ಯರ |
ಪಾರ ಸಂಖ್ಯೆಯೊಳಲ್ಲಿ ನೆಲಸಿಹ | ರಾರುಭಟಿಸಿ ||3||

ಇಂತು ಚಿಂತಿಸುತಿರಲು ಕ್ಷಣದೊಳು |
ದಂತಿ ಸಿಂಹ ವರಾಹ ವೃಕಗಳ |
ತಿಂತಿಣಿಯು ಗಜರುತ್ತ ಧಾವಿಸಿ | ಬಂತು ಬಳಿಗೆ ||4||

ಸಂದಣಿಸಿದಾ ಕ್ರೂರಮೃಗಗಳ |
ನಂದು ವಿವಿಧಾಯುಧಗಳಿಂದಲಿ |
ಕೊಂದು ಕಳೆದಾ ವನವಿನಾಶನ | ಕೆಂದು ಪೊರಟ ||5|| 17 ||

ನಾದನಾಮಕ್ರಿಯೆ – ಅಷ್ಟ
ಕಾನನಗಳನಿಂತು ಕಡಿಯುತ್ತ | ಪಕ್ಷಿ |
ಪ್ರಾಣಿಗಳನ್ನುರೆ ಮಡುಹುತ್ತ ||
ಬಾನಿನೆತ್ತರ ರಾಶಿಯೊಟ್ಟಿದ | ಶೂನ್ಯ |
ಮೌನದಾವರಣವನೆಸಗಿದ ||1||

ಕಾಡನುಳಿದು ವನ್ಯ ಮೃಗಗಳು | ಬಂದು |
ನಾಡಿಗಿಳಿದು ಧಾಳಿಗೈದವು ||
ಕೇಡಾಯಿತಕಟೆಂದು ಜನಗಳು | ಭಯ |
ಗೂಡುತ ಮಿಗೆ ತಲ್ಲಣಿಸಿದರು ||2||

ಕಾಲ ಕಾಲಕೆ ಮಳೆಯಾಗದೆ | ಪ್ರತಿ |
ಕೂಲವಾದುದು ಕೃಷಿ ಸಾಗದೆ ||
ಗೋಳಿಟ್ಟರೆಲ್ಲಾ ಪ್ರಜೆಗಳು | ಕಡೆ |
ಗಾಲ ಬಾಳುವೆಗೆಂದಳಲಿದರು ||3|| 20 ||

ಭಾಮಿನಿ
ಧಾರಿಣಿಯ ಸ್ಥಿತಿಗತಿಗಳೆಲ್ಲವು |
ಏರುಪೇರಾಗಲ್ಕೆ ಬಳಿಕಾ |
ಭೂರಿ ಚಿಂತೆಯನಾಂತು ತಾ ವನದೇವಿ ಮತ್ತಿರದೆ ||
ಕ್ರೂರತನದಿಂ ವೃಕ್ಷಹನನವ |
ಮೀರಿಗೈವ ಪ್ರಚೇತಸನ ಬಳಿ |
ಸಾರಿ ತಡೆದಳು ಮಾಣಕಟ ಮಹನೀಯಯೆಂದೆನುತ || 1|| 21 ||

ಕೇದಾರಗೌಳ – ಝಂಪೆ
ನಿಲ್ಲುನಿಲ್ಲೆಲೆ ಮಹಿಮನೆ | ವಿಪಿನಗಳ |
ನೆಲ್ಲ ಸವರುವುದು ಸಮನೆ ||
ಸಲ್ಲದಿಹ ಕಾಯಕವಿದು | ಈ ಸೃಷ್ಟಿ |
ಯೆಲ್ಲ ಬರಡಾಗಲಹುದು || 1 || 22 ||

ಕೇದಾರಗೌಳ– ಅಷ್ಟ
ಯಾರೆನ್ನ ತಡೆಯುವ ನೀರೆಯೆ ನಿನಗಿಂಥ |
ಪಾರುಪತ್ಯವನಿತ್ತಿಹ ||
ಧೀರರು ಯಾರು ನಿವಾರಿಪೆ ಧರೆಯ ವಿ |
ಕಾರವನೀ ತೆರದಿ || 1|| 23 ||

ಕೇದಾರಗೌಳ – ಝಂಪೆ
ವನದೇವಿಯಾನು ಕೇಳು | ಸಕಲ ಕಾ |
ನನಗಳನು ಪೊರೆಯುವವಳು ||
ಇನಿತೇಕೆ ರೋಷ ನಿನಗೆ | ನಿಯತಿಯನು |
ಹನನಗೈಯುವರೆ ಹೀಗೆ ||1 || 24 ||

ಕೇದಾರಗೌಳ – ಅಷ್ಟ
ಮೇರೆ ಮೀರಿಯೆ ಪಸರಿಸಿದೆ ಕೊಬ್ಬಿದ ಕಾಡು |
ಊರನು ನುಂಗುತಿದೆ ||
ಕ್ರೂರ ಮೃಗಗಳ ಘೋರತೆಯನ್ನಿಂತು |
ದೂರ ಗೈಯುತಲಿಹೆನು ||1 || 25 ||

ಕೇದಾರಗೌಳ – ಝಂಪೆ
ಜೀವಜಾತಗಳೆಲ್ಲಕೆ | ಈ ಜಗದಿ |
ಜೀವಿಸುವ ಅವಕಾಶಕೆ ||
ಈ ವಿಧದ ವಿಘ್ನ ಸಲ್ಲ | ಭಾವಿಸಲು |
ದೇವನಿದ ಮೆಚ್ಚನಲ್ಲ || 1|| 26 ||

ಕೇದಾರಗೌಳ – ಅಷ್ಟ
ನಾರಿ ಸಾಕೆಲೆಗೆ ನುಡಿಯದೀಗ ನೀ ಕೆಲ |
ಸಾರು ಎನ್ನಯ ಮನಕೆ ||
ತೋರಿದಂದದಿ ಗೈವೆನೆನ್ನುತ ವೃಕ್ಷ ಸಂ |
ಹಾರಕೆ ಮುಂದಾಗಿರೆ || 1|| 27 ||

ಕಂದ
ವನದೇವಿಯ ನುಡಿಗಳನವ |
ಗಣಿಸುತ ಮತ್ತಾ ಪ್ರಚೇತಸಂ ವೃಕ್ಷಗಳಂ ||
ದಣಿವಿಲ್ಲದೆ ಕಡಿಕಡಿಯಲ್ |
ಮನಗೊಟ್ಟಿರೆ ಚಂದ್ರಮನೀ ಪರಿಯರಿತಾಗಳ್ ||1 || 28 ||

ಸೌರಾಷ್ಟ್ರ – ತ್ರಿವುಡೆ
ಮಂಗಳದ ಬೆಳದಿಂಗಳನು ಲೋ |
ಕಂಗಳಿಗೆ ಕರೆಯುತ್ತ ತಾಪವ |
ಹಿಂಗಿಸುವ ಆನಂದಮೂರುತಿ | ತಂಗದಿರನು ||1||

ಸುಧೆಯ ಕಿರಣವ ಸೂಸಿ ಜೀವರ |
ಹೃದಯದೊಲುಮೆಯ ವರ್ಧಿಸುತ ಬಲು |
ಮುದದಿ ಬಾನಂಗಳದಿ ಮೆರೆದನು | ವಿಧುವು ತಾನು ||2||

ಓಷಧೀಶನು ಯೆನಿಸಿರಲು ವನ |
ನಾಶಗೈವ ಪ್ರಚೇತಸನ ಆ |
ಕ್ರೋಶವನು ತವಿಸುವೆನು ತಾನೆನು | ತಾ ಶಶಾಂಕ ||3|| 31 ||

ನಾದನಾಮಕ್ರಿಯೆ – ಅಷ್ಟ
ಬಂದು ಪ್ರಚೇತಸನೆಡೆಗಾಗ | ಶಶಿ |
ವಂದಿಸಿ ಪೇಳ್ದ ಮಹಾಭಾಗ ||
ಮುಂದುವರಿಸಬೇಡೀ ಕೃತ್ಯವ | ಇದ |
ರಿಂದ ಕರೆವೆ ಲೋಕಕ್ಷೋಭವ || 1 || 32 ||

ಸೌರಾಷ್ಟ್ರ – ತ್ರಿವುಡೆ
ಎಲವೊ ಚಂದ್ರನೆ ವನವಿನಾಶದ |
ಛಲವು ಎನ್ನೀ ಕೃತ್ಯವನು ನೀ |
ನಿಲಿಸಬಂದೆಯೊ ಹಿಡಿದ ಕಾರ್ಯವ | ನುಳಿಸಲಾರೆ || 1 || 33 ||

ನಾದನಾಮಕ್ರಿಯೆ – ಅಷ್ಟ
ಸಕಲ ಓಷಧಿಗಳು ತುಂಬಿರ್ಪ | ವನ |
ನಿಕರವನಿಂತು ನಿರ್ಮೂಲಿಪ ||
ವಿಕಟ ಕೃತ್ಯವನುಳಿ ಪ್ರಾಜ್ಞನೆ | ಲೋಕ |
ವಿಕಳತೆಗೊಳ್ಳುವುದು ತಿಳಿ ನೀನೆ || 1 || 34 ||

ಸೌರಾಷ್ಟ್ರ – ತ್ರಿವುಡೆ
ಕಾಡಕಳೆಯುತ ನಾಡಗೈಯುವೆ |
ರೂಢಿಯನು ನಾ ಸೊಗಸುಗೈವೆನು |
ಮೂಢರಂದದೊಳಹಿತ ವಾಕ್ಯವ | ನಾಡಬೇಡ || 1 || 35 ||

ನಾದನಾಮಕ್ರಿಯೆ – ಅಷ್ಟ
ಅಡವಿಯ ನೀನಿಂತು ಸವರಲು | ಮಳೆ |
ಯಡಗಿ ನಶಿಸಿ ಪೋಗಿ ಬೆಳೆಗಳು ||
ಪೊಡವಿಗೆ ಭೀಕರ ಕ್ಷಾಮವು | ಬರ |
ಲೆಡೆಯಾಯ್ತು ಕೆಟ್ಟಿದೆ ಕ್ಷೇಮವು || 1 || 36 ||

ಸೌರಾಷ್ಟ್ರ – ತ್ರಿವುಡೆ
ವನವೆ ಲೋಕದಿ ಮುಸುಕೆ ಹೋಗಲು |
ಮನುಜತೆಯ ಸಾಹಸ ವಿವೇಕದ |
ಘನತೆಯದು ಮಾಸುವುದು ಮೃಗಜೀ | ವನವು ಮಸಗಿ || 1 || 37 ||

ನಾದನಾಮಕ್ರಿಯೆ – ಅಷ್ಟ
ಅಡವಿಯ ಸಮತೋಲನವ ನೀನು | ಮುಂದೆ |
ಕೆಡಿಸದೆ ಕಾವುದು ಕೇಳಿನ್ನು ||
ಕೊಡುವೆನು ವೃಕ್ಷಕನ್ನಿಕೆಯನ್ನು | ನಿನ್ನ |
ಮಡದಿಯಪ್ಪಳು ಮಾರಿಷೆಯಿನ್ನು || 1 || 38 ||

ಸೌರಾಷ್ಟ್ರ – ತ್ರಿವುಡೆ
ಮಾತನರಿತೆನು ಕುಮುದಬಾಂಧವ |
ಭೂತಳಕ್ಕಹಿತವನು ಬಯಸೆನು |
ಸಾತಿಶಯದೀ ವನವಿನಾಶವ | ರೀತಿಯುಳಿವೆ || 1|| 39 ||

ಆರಭಿ – ರೂಪಕ
ಬಾರೆಯಿತ್ತ ತೋರ ಮೊಗವ ಮಗಳೆ ಮಾರಿಷೆ |
ಧೀರನೀ ಪ್ರಚೇತಸಂಗೆ ನೀರೆಯೆನ್ನಿಸೆ ||
ಸೇರಿದಂತೆ ಕ್ಷೀರಶರ್ಕರೆಗಳು ಎರಕದಿ |
ಭೂರಿ ತೋಷದಿಂದ ಬಾಳಬೇಕು ಚೆಂದದಿ || 1 || 40 ||

ಕಾಪಿ - ಅಷ್ಟ
ಎಂದಾಕೆಯನು ಕರೆತಂದು | ಮುದ |
ದಿಂದ ಪ್ರಚೇತಸನಿಗೆ ವಧುವೆಂದು ||
ಚೆಂದದಿ ವೈವಾಹವೆಸಗೆ | ಆ ವ |
ಸುಂಧರೆ ನಲಿದಳು ಬೇಗೆಯು ನೀಗೆ || 1 || 41 ||

ಸೌರಾಷ್ಟ್ರ – ತ್ರಿವುಡೆ
ಧನ್ಯನಾದೆನು ಹಿಮಕರನೆ ಮನ |
ದನ್ನೆ ಮಾರಿಷೆಯೊಡನೆ ಧರ್ಮವ |
ನಿನ್ನು ಬೆಳಗುವೆ ಜಗವನೊಲುಮೆಯೊ | ಳಿನ್ನು ನೋಳ್ಪ ||1||

ಎಂದು ಸತಿಸಹಿತಮೃತಕಿರಣಗೆ |
ವಂದಿಸಲು ಲೋಕಕ್ಕೆ ಶುಭವ |
ಕ್ಕೆಂದು ಪರಸುತ ಶಶಿಯು ಸಾರಿದ | ನಂದು ನಭಕೆ ||2|| 43 ||

ವಾರ್ಧಕ (ಅರ್ಧ)
ಬಳಿಕಾಪ್ರಚೇತಸಂ ಮಾರಿಷಾದೇವಿಯೊಡ |
ನೊಲುಮೆಯಿಂ ದಾಂಪತ್ಯಧರ್ಮದಿಂದಲಿ ಕಾಲ |
ಕಳೆಯುತಿರೆ ಮಾರಿಷೆಯು ಯಮಳಶಿಶುಗಳ ಪಡೆಯೆ ಸಂಭ್ರಮದೊಳಿರ್ದರಂದು || 1 || 44 ||

ಸಾಂಗತ್ಯ – ರೂಪಕ
ಶಿವಕೃಪೆಯಿಂದಲಿ ಕುವರರುದಿಸಿದರು |
ಅವಳಿ ಮಕ್ಕಳೊಳಾರು ಮುಂದೆ ||
ಭುವನವಂದಿತ ಪ್ರಜಾಪತಿಯಹನೆಂಬಂಥ |
ವಿವರವು ತಿಳಿಯದಾಯ್ತಲ್ಲ ||1||

ಮಾರಿಷೆಯೆಂದಳು ಆರಾದರೇನು ಕು |
ಮಾರರೊಳಗೆ ಭೇದವುಂಟೆ ||
ಮಾರವೈರಿಯು ದಯದೋರಲೀರ್ವರು ಮುಂದೆ |
ಭೂರಿ ಕೀರ್ತಿಯ ಗಳಿಸುವರು ||2||

ಬಳಿಕ ಪ್ರಚೇತಸ ಸಮಿಧೆಗೆನ್ನುತಲೈದೆ |
ಲಲನೆ ಮಕ್ಕಳನು ಕುಟ್ಟಿಮದಿ ||
ಮಲಗಿಸಿರಲು ಶ್ಯೇನ ಪಕ್ಷಿಯೊಂದದ ಕಂಡು |
ಕೆಳಗಿಳಿಯಿತು ಭರನಂದು ||3|| 47 ||

ಸೌರಾಷ್ಟ್ರ – ತ್ರಿವುಡೆ
ತಿನಲು ದೊರಕಿತು ಮಾಂಸಪಿಂಡವು |
ಯೆನುವ ಭ್ರಮೆಯೊಳು ಶಿಶುವನೊಂದನು |
ಕ್ಷಣದಿ ಬಿಗಿವಿಡಿದೆತ್ತಿ ಹಾರಿತು | ಬನದ ನಡುವೆ ||1||

ಶಿಶುವ ಕಾಣದೆ ಬಳಿಕಲಾ ಮಾ |
ರಿಷೆಯು ಮಮ್ಮಲ ಮರುಗುತಿರಲಾ |
ವಿಷಯವರಿತು ಪ್ರಚೇತಸನು ಬಲು | ವ್ಯಸನಗೊಂಡ ||2||

ವಿಧಿವಿಲಾಸವ ಮೀರಲಾಗದು |
ಮದನಹರನೊಲುಮೆಯಲಿ ಶಿಶುವಿದು |
ವಿದಿತ ಕೀರ್ತಿಯ ಪಡೆವುದೈ ಬಿಡು | ಎದೆಯ ಮರುಕ ||3||

ಎನುತ ಮತ್ತಾ ದಕ್ಷನೆನ್ನುವ |
ತನಯನನು ಜತನದಲಿ ತಾ ಪೋ |
ಷಣೆಯಗೈಯುತಲಿರೆ ಭವಿಷ್ಯವ | ನೆನೆದು ಮನದಿ ||4|| 51 ||

ಚಿತ್ರಶಿಖನ ಪ್ರವೇಶ

ಕಾಂಬೋಧಿ – ಝಂಪೆ
ದಂಡಕಾರಣ್ಯ ಪೂರ್ವಾಂಚಲದಿ ವ್ಯಾಧ ರಾ |
ತಂಡಕ್ಕೆ ನಾಯಕನು ಯೆನಿಸಿ ||
ಪುಂಡುಕೂಟದೊಳಿರ್ದ ಚಿತ್ರಶಿಖಬೇಡ ತಾ |
ಹೆಂಡತಿಯು ಚಿತ್ರಿಣಿಯ ಸಹಿತ ||1||

ಒಂದು ದಿನ ಚಿತ್ರಶಿಖ ಬೇಟೆಗೈದಿರೆ ದೂರ |
ದಿಂದ ಮಗುವಳಲನಾಲಿಸುತ ||
ಮುಂದಕ್ಕೆತರೆ ಮೇಲೆ ತರುಮೂಲದೊಳು ಪಕ್ಷಿ |
ಯೊಂದು ಶಿಶುವನ್ನು ಬಿಗಿವಿಡಿದು ||2||

ತಿಂದು ತೇಗಲು ಹವಣಿಸುತ್ತಿರಲು ವೇದನೆಯೊ |
ಳಂದು ಮಗುವರಚುತಿರೆ ಕಂಡು ||
ಒಂದೆ ಬಾಣದಿ ಶ್ಯೇನಪಕ್ಷಿಯನು ಕೊಂದು ಮರ |
ದಿಂದ ಕಂದನನು ಕೆಳತಂದ ||3||

ಸಿಕ್ಕಿತೆನ್ನಯ ಪುಣ್ಯದಿಂದಲೀ ಶಿಶುವೆನ್ನು |
ತಕ್ಕರೆಯೊಳದನವಚುತೋಡಿ ||
ಮಿಕ್ಕು ಸಂಭ್ರಮಿಸುತ್ತ ಕಕ್ಕುಲತೆಯೊಳು ಬೇಗ |
ಮಕ್ಕಳಿಲ್ಲದ ಮಡದಿಗಿತ್ತ ||4||

ಬತ್ತಿರುವ ತೊರೆಗೆ ಜಲ ಹತ್ತಿ ಹರಿದಂತಾಯ್ತು |
ಎತ್ತಿಕೊಂಡದಕೆ ಮುತ್ತಿಟ್ಟು ||
ಎತ್ತ ದೊರಕಿತು ಚೆಲ್ವ ಪುತ್ರಳಿಯು ಎನ್ನುತ್ತ |
ಚಿತ್ರಿಣಿಯು ಹಿರಿಹಿಗ್ಗಲಂದು ||5||

ದುರುಗವ್ವ ಕಂದನನು ಕರುಣಿಸಿದಳೆಂದೆನುತ |
ಕುರಿ ಕೋಣಗಳ ಕಡಿದು ಕುಣಿದು ||
ಪರಮ ಸಂತೋಷದಲಿ ಹಬ್ಬ ಮಾಡಿದರಂದು |
ಸುರೆಯನೀಂಟುತ್ತ ಬೇಡಗಣ ||6|| 57 ||

ಕಾಪಿ - ಅಷ್ಟ
ದುರುಗವ್ವ ಮಣಿದೇವು ನಿನಗೆ | ನಿನ್ನ |
ಕರುಣೆಯ ಹಿರಿಗಣ್ಣು ಇರಲೆಮ್ಮ ಮೇಗೆ || ಪಲ್ಲ ||
ಚಿಣ್ಣನ್ನ ಕೊಟ್ಟೆಯ ನಮಗೆ | ಹೊಟ್ಟೆ |
ತಣ್ಣಗಿರಲಿ ಹಾಲು ಹಣ್ಣಿದೊ ನಿನಗೆ ||
ಸುಣ್ಣಬಣ್ಣದಲಿ ಸಿಂಗರಿಸಿ | ಬಲು |
ಚೆನ್ನಾಗಿ ಚೆಂಗಣಗಿಲೆ ಹೂವ ಮುಡಿಸಿ ||1||

ಕಡವೆಯ ಬಾಡನ್ನು ಅಟ್ಟು | ಕಳ್ಳು |
ಕಡುಬು ಕಜ್ಜಾಯಂಗಳನ್ನು ಮಾಡಿಟ್ಟು ||
ತೊಡವೆ ಜೇನನು ದೊನ್ನೆಲಿರಿಸಿ | ಮತ್ತೆ |
ಸುಡುಗೆಣಸನು ಎಡೆ ಗೈದೆವು ಬಡಿಸಿ ||2||

ತೊಟ್ಟಿಲನೊಂದ ನಮ್ಮಲ್ಲಿ | ಇಂತು |
ಕಟ್ಟಿಸಿ ತೂಗಿಸಿದೆಯ ಅರ್ತಿಯಲ್ಲಿ ||
ಪುಟ್ಟಾಣಿ ಚೆಲ್ವ ಕಂದನನು | ಒಳ್ಳೇ |
ನಟ್ಟಾನೆ ಬಳೆವಂದೆ ಹರಸವ್ವ ನೀನು ||3|| 60 ||

ಭಾಮಿನಿ
ಪರಮತೋಷದಿ ದಮನನೆಂಬ ಪೆ |
ಸರನಿರಿಸಿ ಕರೆಕರೆದು ಮುದ್ದಿನ |
ಸರಿ ಸುರಿದು ಪೊರೆಯಲ್ಕೆ ಬಳೆಯುತಲಿರ್ದ ಬೇಡರೊಳು ||
ತರಳನಿಗೆ ಕುಲಕಸುಬ ಕುಶಲದೊ |
ಳರುಹಿ ಚಿತ್ರಶಿಖಾಖ್ಯ ತನ್ನಯ |
ನೆರವಿಯೊಳೆ ಕರೆದೊಯ್ದು ಪಥಿಕರ ಸುಲಿಯೆ ವನಪಥದಿ || 1 || 61 ||

ದಮನನ ಪ್ರವೇಶ

ಸೌರಾಷ್ಟ್ರ – ತ್ರಿವುಡೆ
ಶಿರವನೊಡೆಯುವ ಖೂಳಕೃತ್ಯದಿ |
ನಿರತನಾಗುತ ದಮನ ಬೇಡರ |
ನೆರವಿಯೊಳು ಕುಳವಾಡಿಯೆನಿಸುತ | ಮೆರೆಯುತಿರ್ದ ||1||

ದಾರಿಹೋಕರನಾಕ್ರಮಿಸುತಲಿ |
ಚೂರಿದೋರುತ ವಸ್ತು ಒಡವೆಯ |
ಸೂರೆಗೊಳ್ಳುತಲಿರ್ದನತಿಶಯ | ಕ್ರೂರತೆಯಲಿ ||2||

ಇಂತಿರುತ್ತಿರೆ ಲೋಕನಾಟಕ |
ಚಿಂತೆಯಾಂತಿಹ ನಾರದನು ತ |
ನ್ನಂತರಂಗದಿ ಚಿಂತಿಸಿದ ತಾ | ನಂತರಿಸದೆ ||3||

ಬೂದಿಯೊಳಗಿನ ಕೆಂಡದಂದದಿ |
ವ್ಯಾಧರೊಳು ಸೇರಿರ್ಪ ದಮನನು |
ಶೋಧಿಸುತ ನಿಜಗುಣ ಸುಧರ್ಮದ | ಹಾದಿಯನ್ನು ||4||

ಅಂಧಕಾರವನುಳಿದು ಜ್ಞಾನದ |
ಬಂಧುರದ ಬೆಳಗನ್ನು ಮುಂದಕೆ |
ಪೊಂದುವಂದವನೆಸಗುವೆನು ತಾ | ನೆಂದು ಪೊರಟ ||5||

ನಾರದನು ಹರಿನುತಿಯ ಗೈದಾ |
ದಾರಿಯೊಳು ಬರಲಾಗ ನಿಮಿಷದಿ |
ಘೋರನೆಯೆ ಬಳಸುತ್ತ ತುಡುಕಿದ | ನಾರುಭಟಿಸಿ ||6||

ಆರರೆ ನೀನಾರೆಲವೊ ಮತ್ತೀ |
ಪರಿಯ ವೇಷವಿದೇನು ಕರದೊಳ |
ಗಿರುವ ವಸ್ತುಗಳನ್ನು ಮಡಗೆಲೊ | ಭರದೊಳೀಗ ||7|| 68 ||

ಮಧುಮಾಧವಿ - ಅಷ್ಟ
ನಾರದ ದಿಗಿಲನ್ನು ನಟಿಸುತ್ತಲೆಂದ |
ಯಾರಯ್ಯ ಎನ್ನೊಳೇಕೀ ಬಲೋದ್ಬಂಧ ||
ನಾರದ ಮುನಿ ನಾನು ನಿರ್ಧನನಹೆನು |
ಈ ರೀತಿ ಪಥದೊಳು ಪೀಡಿಪರೇನು || 1 || 69 ||

ಮಾರವಿ - ಏಕ
ಬಡಮುನಿ ಕೇಳೆಲೊ ಪಥಿಕರನೀಪರಿ |
ತಡೆವುದು ಕುಲಕಸುಬು ||
ಕೊಡು ಕೊಡು ನಿನ್ನಾ ಬೆಡಗಿನ ವಾದ್ಯವ |
ನುಡಿಯದೆ ಈ ಕ್ಷಣದಿ || 1 || 70 ||

ಮಧುಮಾಧವಿ - ಅಷ್ಟ
ಸುಲಿಯಬಹುದೆ ಕಂಡವರನಿಂತು ಪಥದಿ |
ಗಳಿಸುವೆ ಪಾಪರಾಶಿಯನಿಂಥ ಕತದಿ ||
ಅಳಿದ ಮೇಲ್ ನರಕಕ್ಕೆ ಇಳಿಯುವೆ ಕೇಳು |
ಸುಲಲಿತ ಸದ್ಧರ್ಮವರಿತು ನೀ ಬಾಳು || 1 || 71 ||

ಮಾರವಿ - ಏಕ
ಕಲಿಸಲು ಬಂದೆಯ ಧರ್ಮಾಧರ್ಮವ |
ಹುಲುಮುನಿ ವ್ಯರ್ಥದಲಿ ||
ಗಳಹಲು ಬೇಡೆಲೊ ಆ ದುರುಗವ್ವೆಗೆ |
ತಲೆಗಡಿಯುವೆ ಕೇಳಾ ||1 || 72 ||

ಮಧುಮಾಧವಿ - ಅಷ್ಟ
ಒಂದು ಮಾತಿಗೆ ಸದುತ್ತರವನೀಯುವೆಯ |
ಇಂದುವರೆಗೆ ಗೈದ ಪಾಪದ ಹೊರೆಯ ||
ಒಂದು ಪಾಲನು ನಿನ್ನ ಸತಿಸುತರೊಲಿದು |
ಎಂದಿಗು ಹೊರಲೆಳಸುವರೆ ತಾವ್ ತಿಳಿದು || 1 || 73 ||

ಭಾಮಿನಿ
ಎನಲು ದಮನನು ತಡೆದು ತನ್ನಯ |
ಮನದೊಳರೆಚಣ ಯೋಚಿಸುತಲಾ |
ಮುನಿಯ ತರುವಿಗೆ ಬಿಗಿಯುತೆಂದನು ಹದನವಿದನರಿಯೆ ||
ಮನೆಗೆ ಧಾವಿಸಿ ಮಡದಿ ಮಕ್ಕಳ |
ಮನಸಿನಿಂಗಿತವರಿತು ಬಹೆನೈ |
ಮನವ ಚಂಚಲಗೈದೆಯಕಟಾ ಎನ್ನುತೈದಿದನು|| 1 || 74 ||

ಸಾಂಗತ್ಯ – ರೂಪಕ
ಮತ್ತೆ ಧಾವಿಸಿ ಮನೆಗೈದಿ ದಮನ ಸತಿ |
ಮುಕ್ತೆಯ ತಾ ಕರೆದೆಂದ ||
ಇತ್ತ ಕೇಳೆಲೆ ಹೆಣ್ಣೆ ಮನಕೆ ಸಂಶಯದೊಂದು |
ಬಿತ್ತು ತಾ ಮೊಳೆದೋರಿತಿಂದು ||1||

ತಡೆದು ಜಡಿದು ದಾರಿಹೋಕರ ಮಂಡೆಯ |
ಬಡಿದು ಸುಲಿದು ಸೂರೆಗೈದು ||
ಒಡವೆ ವಸ್ತುಗಳನ್ನು ತಂದಿತ್ತೆನಿದುವರೆ |
ಗಡಿಸಿದ ಪಾಪರಾಶಿಯಲಿ ||2||

ಮಡದಿ ಮಕ್ಕಳು ನೀವು ಪಡೆವಿರೆ ಪಾಲನು |
ನುಡಿವುದೆನ್ನೊಡನೆನೆ ಮುಕ್ತಿ ||
ಕಡುನಗೆಯಲಿ ಪೇಳ್ದಳೀತರ ಮಾತಿದು |
ಮಡದಿ ಮಕ್ಕಳು ಹೊಣೆಯಹರೆ ||3||

ಹೆಂಡಿರು ಮಕ್ಕಳ ಪೊರೆವುದೆಂತಾದರು |
ಗಂಡನ ಕರ್ತವ್ಯವೈಸೆ ||
ಮಂಡೆ ಬಡಿದ ಪಾಪ ಖಂಡಕಿ ಹೊಣೆಯಲ್ಲ |
ಖಂಡಿತವರಿತುಕೊಳ್ಳುವುದು ||4||

ಸತಿಯಿಂತು ನುಡಿಯಲು ಮತಿಗೊಂದು ಬೋಧೆಯ |
ದ್ಯುತಿ ಬೆಳಗಿದ ತೆರನಾಗೆ ||
ಗತ ಜೀವನದ ಗನ್ನಗತಕಗಳನ್ನೆಣಿ |
ಸುತಬಳಿಕಿಂತೆಂದನಾಗ ||5|| 79 ||

ಘಂಟಾರವ – ಏಕ
ಮುಕ್ತಿ ನೀನೆಂದ ಮಾತು |
ಯುಕ್ತವಾಯಿತೆನ್ನ ಮನದ |
ಕತ್ತಲೆಯ ಕಳೆದು ಬೆಳಕ | ಹೊತ್ತಿಸಿದುದಲಾ ||1||

ಪಾಪಪುಣ್ಯವೆಂಬುವಂಥ |
ಲೇಪವಿಲ್ಲವೆಂದ ಬಳಿಕ |
ಓಪಳೇಕೆ ಮಕ್ಕಳೇಕೆ | ಪೋಪೆನೀಗಲೆ ||2|| 81 ||

ಸೌರಾಷ್ಟ್ರ – ತ್ರಿವುಡೆ
ಎನುತ ಭರದಿಂದೈದಿ ನಾರದ |
ಮುನಿಯ ಬಂಧನಗಳೆದು ಪಾದಕೆ |
ಮಣಿದು ಪೇಳ್ದ ಮಹಾತ್ಮ ಮನ್ನಿಸು | ವಿನಯನಿಧಿಯೆ ||1||

ಪತಿಯು ಗೈದಾ ಪಾಪಕರ್ಮಕೆ |
ಸತಿಸುತರು ಹೊಣೆಯಲ್ಲ ಗಡ ದು |
ರ್ಗತಿಗೆ ನಾನೇ ಪೋಪುದಿದು ವಿ | ಶ್ರುತವದಾಯ್ತು ||2||

ಏಸು ಕೊಲೆ ಸುಲಿಗೆಗಳ ಗೈದೆನು |
ಹೇಸದೆಲೆ ಸಂಸಾರ ಪೋಷಣೆ |
ಗೋಸುಗವೆ ಮುಳುಗಿದೆನು ಪಾತಕ | ರಾಶಿಯೊಳಗೆ ||3||

ಇನ್ನೆನಗೆ ಸಂಸಾರವೇತಕೆ |
ಮುನ್ನ ಮಾಡಿದ ಕರ್ಮಫಲಗಳ |
ತಿಣ್ಣವನು ತೀರ್ಚಲ್ಕೆ ಧ್ಯಾನದ | ಕಣ್ಣನೀಯೈ ||4||

ಎಂದು ಬೇಡಲು ಮೈದಡವಿ ತಾ |
ನೆಂದ ನಾರದ ನಗುತ ತಿಳಿದೆಯ |
ಕಂದ ನೀ ಸಂಸಾರ ಭ್ರಮೆಯಾ | ಬಂಧನವನು ||5||

ಸತ್ತ್ವವಿದೆ ನಿನ್ನೊಳಗೆ ಶುದ್ಧ ವಿ |
ರಕ್ತಿ ಮುಂದಕೆ ಪಕ್ವವಾಗಲು |
ಉತ್ತಮೋತ್ತಮನೆನಿಸಿ ಮುಂದಕೆ | ಕೀರ್ತಿ ಪಡೆವೆ ||6||

ಪರಮ ತಾರಕ ಮಂತ್ರದಕ್ಷರ |
ವೆರಡನುಪದೇಶಿಸಲು ದಮನನು |
ಚರಣ ರಜವನು ಮುಡಿದು ತಪಸಿಗೆ ಪೊರಟನಾಗ ||7||

ಘೋರತರ ಕಾಂತಾರ ಗರ್ಭವ |
ಸಾರಿ ಪಿಪ್ಪಲ ವೃಕ್ಷ ಮೂಲವ |
ನಾರಿಸುತ ಮತ್ತಿರದೆ ತೊಡಗಿದ | ಭೂರಿ ತಪವ ||8|| 89 ||

ವಾರ್ಧಕ
ತೊರೆದನ್ನ ಪಾನಾದಿ ಸರ್ವ ವ್ಯಾಪಾರಗಳ |
ಸ್ಥಿರಚಿತ್ತನಾಗಿ ಏಕೋಭಾವದಿಂ ತಪೋ |
ನಿರತನಾಗಿರ್ದ ನಿಶ್ಚಲದೇಹಿಯಾ ನಿಷಾದಂ ನಿಗ್ರಹಾತ್ಮನಾಗಿ ||
ಉರುಳಿದುದು ವತ್ಸರಂಗಳ ಚಕ್ರ ದಮನನಂ |
ಮರೆದುದಾತನ ಬಳಗವತ್ತಲಾ ವನದೊಳಗೆ |
ತರುಮೂಲದೊಳು ತಪಸ್ವಿಯ ತನುವನಾವರಿಸಿ ಹುತ್ತ ಹಬ್ಬಿತು ಸುತ್ತಲು || 1 || 90 ||

ಮಧ್ಯಮಾವತಿ – ತ್ರಿವುಡೆ
ಸುರಮುನಿಯು ಬಳಿಕೊಮ್ಮೆ ದಮನನ |
ಪರಿಯನರಿಯುವೆನೆನ್ನುತಾತನ |
ನರಸಿಕೊಳುತೈದಿದನು ಮತ್ತಾ |
ತರುನಿಬಿಡವಹ ತಾಣಕೆ | ಕರೆದು ಪೆಸರ ||1||

ಮರಗಳಿರುಕಿನ ನಡುವೆ ಆರಳಿಯ |
ಮರದ ಮೂಲದಿ ಪುರುಷ ಗಾತ್ರದ |
ಪಿರಿಯ ಹುತ್ತವನೊಂದ ಕಾಣುತ |
ಲರರೆ ಚಿತ್ರವಿದೆನ್ನುತ | ಬೆರಗುವಡೆದ ||2||

ಕಂದ ದಮನ ಅಖಂಡ ತಪದಲಿ |
ನಿಂದೆಯಾ ಲೇಸಾಯ್ತು ಹುತ್ತದ |
ಬಂಧವನು ಬಿಡಿಸುತ್ತ ಮೈದೋ |
ರಿಂದು ವರಶುಭಯೋಗವು | ಎಂದು ಕರೆಯೆ ||3||

ಭೂರಿ ವೃಷ್ಟಿಯು ಸುರಿದುದಾ ಜಲ |
ಧಾರೆಯಲಿ ಕರಗಿದುದು ಹುತ್ತವು |
ಚಾರು ತೋಜೋಮೂರ್ತಿಯನು ಕ |
ಣ್ಣಾಲೆ ಕಾಣುತ ಹಿಗ್ಗಿದ | ನಾರದಾಂಕ ||4|| 94 ||

ಕೇದಾರಗೌಳ – ಅಷ್ಟ
ಏಳೇಳು ಕಂದ ಕಣ್ದೆರೆ ನೀನು ಕಣ್ಮುಚ್ಚಿ |
ಕಾಲವೆನಿತು ಸಂದಿತು ||
ಈ ಲೋಕವನು ನವದೃಷ್ಟಿಯಿಂದಲಿ ನೀನು |
ಲೀಲೆಯೊಳಾಲೋಕಿಸು ||1||

ಮೆತ್ತಿದ ಕರ್ಮ ಲೇಪವು ಹರಿವಂದದಿ |
ಹುತ್ತವು ತಾ ಕರಗೆ ||
ಮತ್ತೆ ಬಹಿರ್ಮುಖನಾಗಿ ದಮನ ಮುನಿ |
ಸತ್ತ್ವಮಗೆರಗಿದನು ||2||

ವತ್ಸ ಸಾಕೇಳು ಪ್ರಾಚೇತಸ ನಿನಗೆ ಋ |
ಷಿತ್ವವು ಸಿದ್ಧಿಸಿದೆ ||
ಉತ್ತಮಿಕೆಯನೊಂದಿ ಹಸನಾದುದೈ ತವ |
ಚಿತ್ತ ಕ್ಷೇತ್ರವು ಲಾಲಿಸು ||3||

ಹತವಾದುದೈ ನಿನ್ನ ಗತಜನ್ಮ ವಲ್ಮೀಕ |
ಸುತ ನೀನು ವಾಲ್ಮೀಕಿಯು ||
ಕ್ಷಿತಿಯೊಳದ್ಭುತಮಪ್ಪ ಕೃತಿಗೈದು ಲೋಕ ವಿ |
ಶ್ರುತ ಕೀರ್ತಿ ಗಳಿಸುವುದು ||4||

ಭವದೀಯ ಕೃಪೆಯಿಂದೆ ನವಜನ್ಮವಾದುದು |
ದಿವಿಜಮುನಿಯೆ ಮುಂದಕೆ ||
ಕವಿಶ್ರೇಷ್ಠನೆನಿಸುವ ಯೋಗವು ಘಟಿಪುದೆ |
ತವಕರುಣೆಯೊಳೆನಗೆ ||5|| 99 ||

ಬೇಗಡೆ – ಅಷ್ಟ
ಅವಧರಿಸು ವಾಲ್ಮೀಕಿ ನೀನಿಂದು | ಈ ಲೋಕದೊಳು ಸ |
ತ್ಕವಿಯೆನಿಪುದನುಪಮದ ಯೋಗವದು ||
ಕವಿಯೆ ಬ್ರಹ್ಮನು ಕವಿ ಪ್ರಜಾಪತಿ |
ಕವಿ ಮನೀಷಿಯು ಕ್ರಾಂತದರ್ಶಿಯು |
ಭುವನವಂದ್ಯನು ಲೋಕಕಾನಂ |
ದವನು ನೀಡುವ ವಿನುತ ಮಹಿಮನು ||1||

ಅಂತಿರಲು ವರಕಾವ್ಯ ವಸ್ತುವನು | ಸುರಮುನಿಯೆ ಸೂಚಿಪು |
ದೆಂತು ವಿರಚಿಪುದಮರ ಕಾವ್ಯವನು ||
ಪಿಂತೆ ಸಂದಿಹ ಕಥೆಯನೊರೆವೆನೊ |
ಗ್ರಂಥನಾಯಕನಾರು ಮಹಿಮಾ |
ವಂತ ಸರ್ವಗುಣಾನ್ವಿತನ ನಾ |
ನೆಂತು ಶೋಧಿಪೆನೆಂತು ವರ್ಣಿಪೆ ||2||

ತರಣಿವಂಶಲಲಾಮ ಗುಣಧಾಮ | ದಶರಥನ ನಂದನ |
ಪರಮ ಪುರುಷೋತ್ತಮನು ಶ್ರೀರಾಮ ||
ಧರಣಿವಂದ್ಯನು ಸಕಲ ಸದ್ಗುಣ |
ಭರಿತನಾತನ ಶುಭಚರಿತವನು |
ವರಮಹಾಕಾವ್ಯಸ್ವರೂಪದಿ |
ವಿರಚಿಸುತ ಧೀ ಶಕ್ತಿಯಾಂತಿಹೆ ||3|| 102 ||

ಭಾಮಿನಿ
ಎಂತು ವಿರಚಿಪುದೆನುತ ನೀನದ |
ಚಿಂತಿಸುವ ಕತವಿಲ್ಲ ಶೀಘ್ರದೊ |
ಳಂತರಂಗದಿ ತಾನೆ ಸ್ಫುರಿಸುವುದಖಿಳ ವಿಷಯಗಳು ||
ಮುಂತೆ ಜಗದೊಳಗಾದಿ ಕವಿಯೆಂ |
ದಿಂತು ಆಚಂದ್ರಾರ್ಕವೆನಿಪ ದಿ |
ಶಾಂತ ಕೀರ್ತಿಯ ಪಡೆವೆ ಶುಭಮಸ್ತೆಂದು ಹರಸಿದನು || 1 || 103 ||

ಸಾಂಗತ್ಯ - ರೂಪಕ
ಮುನಿವರ ವಾಲ್ಮೀಕಿ ತಮಸಾ ನದಿತೀರ |
ವನದೊಳಾಶ್ರಮವನ್ನೆಗೈದು ||
ಘನ ತಪ ಜಪ ಮಗ್ನನಾಗಿರ್ದ ನಿಜಶಿಷ್ಯ |
ಜನಸಹಿತಲ್ಲಿ ಶಾಂತಿಯಲಿ ||1||

ಸುರಮುನಿಯೆಂದಿಹ ವಾಣಿ ವಾಲ್ಮೀಕಿಯ |
ಸ್ಮರಣೆಯೊಳಿರ್ದುದು ನಿರತ ||
ಸ್ಫುರಣೆಯಾಗದೆ ಕಾವ್ಯ ವಿರಚಿಸುವಂದವ |
ನರಿಯದೆ ಮಿಡುಕುತ್ತಲಿರ್ದ ||2||

ಇರಲೊಮ್ಮೆ ವಾಲ್ಮೀಕಿ ತಮಸಾತೀರದೊಳು ಸಂ |
ಚರಿಸುತ್ತ ಪ್ರಕೃತಿಲೀಲೆಗಳ ||
ನೆರೆನೋಡುತಾತ್ಮರಸಿಕನಾಗಿ ಪರಬ್ರಹ್ಮ |
ನಿರವನೆಲ್ಲೆಡೆ ಗುರುತಿಸುತ || 3 ||

ಬರುತಿರಲಾನಂದದಿಂದ ಮುಂದಲ್ಲೊಂದು |
ತರುವಿನ ಮೇಗಡೆಯಲ್ಲಿ ||
ಉರುತರ ಪ್ರೇಮದಿ ಕ್ರೌಂಚ ಯುಗಳವೊಂದು |
ಸರಸದೊಳಿರಲು ಮೈಮರೆತು || 4 || 107 ||

ಕಾಂಬೋಧಿ – ಝಂಪೆ
ಮರದ ಮರೆಯೊಳಗಡಗಿ ಹೊಂಚು ಹಾಕುತಲಿರ್ದ |
ನೊರುವ ಬೇಡಂ ಬೇಗನಾಗ ||
ಸ್ಮರವಿಭ್ರಮದೊಳಿರ್ದ ಖಗಯುಗದೊಳೊಂದಕ್ಕೆ |
ಗುರಿಯಿಟ್ಟು ಬಾಣದಿಂದೆಚ್ಚ ||1||

ಕ್ರೂರನಾರಾಚ ನಾಟಿದ ಪುರುಷ ಕ್ರೌಂಚವದು |
ಚೀರಿ ಧೊಪ್ಪನೆ ಬಿದ್ದು ನೆಲಕೆ ||
ಬಾರಿ ಬಾರಿಗೆ ರೆಕ್ಕೆಯಪ್ಪಳಿಸಿ ನೆತ್ತರನು |
ಕಾರಿ ಕಾಯವನುಳಿದುದಾಗ ||2||

ಗತಜೀವವಾಗಿರ್ದ ಪತಿದೇಹವನು ಕ್ರೌಂಚ |
ಸತಿ ಸುತ್ತಿ ಸುಳಿದು ಶೋಕದೊಳು ||
ಜತೆಯಗಲಲಾರದಾಕ್ರಂದಿಸಲು ವಾಲ್ಮೀಕಿ |
ವ್ಯಥಿತಮಾನಸನಾದನಾಗ ||3||

ಕರುಣದಾರುಣ ದೃಶ್ಯ ಕಾಣುತಂತಃಕರಣ |
ಕರಗಿ ವಾಲ್ಮೀಕಿ ಮುಖದಿಂದ ||
ಭರದಿ ಹೊಮ್ಮಿತು ಶಾಪವಾಕ್ಯವಾ ಬೇಡನಂ |
ಕುರಿತು ತನ್ನಿಂ ತಾನೆ ಕ್ಷಣದಿ ||4||

ಎಲೊ ನಿಷಾದನೆ ಕೇಳು ಕಾಮಮೋಹಿತವಾಗಿ |
ನಲಿವ ಪಕ್ಷಿಯ ಕೊಂದ ಕತದಿ ||
ಅಳಿವು ಹೊಂದಲಿ ನಿನ್ನ ಏಳಿಗೆಯು ಎಂಬ ನುಡಿ |
ಅಲಗಾಗಿ ಹೊರಹೊಮ್ಮಿತಂದು ||5|| 112 ||

ಸೌರಾಷ್ಟ್ರ – ತ್ರಿವುಡೆ
ಶೋಕಭರದಿಂ ಹೊಮ್ಮಿದಾ ನುಡಿ |
ಶ್ಲೋಕರೂಪವ ತಳೆಯೆ ವಿಸ್ಮಯ |
ಮೂಕನಾಗುತ ಬಳಿಕಲಾ ವಾ | ಲ್ಮೀಕಿ ಮನದಿ ||1||

ವ್ಯಾಕುಲವ ತಾಳುತ್ತಲಕಟಕ |
ಟೇಕೆ ಕ್ರೋಧಕೆ ಮನವ ತೆತ್ತೆನೊ |
ಏಕೆ ಶಪಿಸಿದ ವಾಕ್ಯವೀಪರಿ | ಶ್ಲೋಕವಾಯ್ತೊ ||2||

ಎಂದು ಕಳವಳವಾಂತಿರಲು ಅರ |
ವಿಂದಭವ ಮೈದೋರಿ ನಸುನಗು |
ತೆಂದ ನಾನೇ ಬ್ರಹ್ಮದೇವನು | ಬಂದೆನೊಲಿದು ||3||

ಕಮಲಸಂಭವನಡಿಗೆ ವಿನಯದಿ |
ನಮಿಸುತಲಿ ವಲ್ಮೀಕನಂದನ |
ನಮಿತ ಭಕ್ತಿಯೊಳೆಂದ ವಾಣೀ | ರಮಣ ವರದ ||4||

ಧನ್ಯನಾದೆನು ಬ್ರಹ್ಮದೇವನೆ |
ನಿನ್ನ ಮೂರ್ತಿಯ ಕಂಡೆನಾದಡೆ |
ಎನ್ನ ಮುಖದಿಂ ಪೊರಟ ಶಾಪಕೆ | ಖಿನ್ನನಹೆನು ||5||

ಏಕೆ ಚಿಂತಿಪೆ ವತ್ಸ ಶೋಕವೆ |
ಶ್ಲೋಕವಾದುದು ಯುಕ್ತ ಛಂದದಿ |
ಲೋಕವಂದ್ಯ ಪುನೀತ ಮಂಗಳ | ಶ್ಲೋಕನೆನಿಪ ||6||

ರಾಮನಾ ಕಥನವದು ನಿನಗತಿ |
ರಾಮಣೀಯಕವಾಗಿ ಸ್ಫುರಿಸುವು |
ದೈ ಮನಕೆ ವಿರಚಿಸು ವಿಲಾಸದಿ | ಭೂಮಕೃತಿಯ ||7||

ರಾಮತಾರಕ ಮಂತ್ರ ಮಹಿಮೆಯು |
ಈ ಮಹಾಕೃತಿಯಿಂದ ಕೇಳಜ |
ರಾಮರವುಯೆಂದೆನಿಸಿ ಮೆರೆವುದು | ಭೂಮಿಯೊಳಗೆ ||8||

ಎನಲು ಮುನಿಯು ಮಹಾಪ್ರಸಾದವು |
ಯೆನುತ ಮತ್ತಜನಂಘ್ರಿಗೆರಗಲು |
ಮನದೆಣಿಕೆ ಸಲಲೆಂದು ಹರಸಿದ | ಕನಕಗರ್ಭ ||9|| 121 ||

ವಾರ್ಧಕ
ಕಮಲಜಂ ಮೈಗರೆಯೆ ವಾಲ್ಮೀಕಿ ಮಾನಸದಿ |
ವಿಮಲ ಭಾವಸ್ಫುರಣವಾಗೆ ಪ್ರತಿಭಾಪೂರ |
ಕಮನೀಯವಾಗಿ ಪ್ರವಹಿಸೆ ಸಿದ್ಧ ಸಂಕಲ್ಪನಾಗೆ ಕಾವ್ಯಸೃಷ್ಟಿಗೆ ||
ಅಮಲ ದರ್ಪಣದಲ್ಲಿ ಪ್ರತಿಫಲಿತಮಾದಂತೆ |
ರಮಣೀಯ ರಾಮಕಥೆ ಒಳಗಣ್ಗೆ ಗೋಚರಿಸೆ |
ಸುಮಧುರ ಮಹಾಕಾವ್ಯ ರಾಮಾಯಣಂ ಆದಿಕವಿಯಿಂದೆ ರಚಿತವಾಯ್ತು ||1|| 122 ||

ಮಂಗಲಪದ
ಮೋಹನ – ತ್ರಿವುಡೆ
ಭುವನ ಭಾಗ್ಯವಿಶೇಷದಿಂದಲಿ |
ಕವಿಯ ಮಾನಸ ಶೈಲದಿಂ ||
ಅವತರಿಸಿ ಜನ ಹೃದಯ ಭೂಮಿಗೆ |
ಪ್ರವಹಿಸುತ ರಸರೂಪದಿಂ ||1||

ಬದುಕನೊಲವಿಂ ಹಸನುಗೈಯುತ |
ಸದಮಲಾನಂದವ ಸದಾ ||
ಒದಗಿಸುವ ವರ ಕಾವ್ಯಮುಖದಿಂ |
ದುದಯಿಸುಗೆ ಶುಭಮಂಗಲಂ ||2|| 124 ||

*****ಶುಭಂ*****

ಕೃತಜ್ಞತೆಗಳು

ಅಂತರಜಾಲ ಪ್ರಕಾಶನ ಪ್ರಾಯೋಜಕರು: ನಿರೀಕ್ಷಿಸಲಾಗಿದೆ.

ಮೂಲ ಪ್ರಕಾಶಕರು: ಶ್ರೀ ಸೋಮೇಶ್ವರರ ಯಕ್ಷಗಾನ ಕೃತಿ ಪ್ರಕಾಶನ ಸಮಿತಿ ಮಂಗಳೂರು ಇವರಿಂದ ೧೯೯೦ರಲ್ಲಿ ಪ್ರಕಟಿತ ಯಕ್ಷಗಾನ ಕೃತಿ ಸಂಪುಟ

ಪ್ರಸಂಗ ಪ್ರತಿ ಆಧಾರ: ಶ್ರೀ ಸೋಮೇಶ್ವರರ ಯಕ್ಷಗಾನ ಕೃತಿ ಪ್ರಕಾಶನ ಸಮಿತಿ ಮಂಗಳೂರು ಇವರಿಂದ ೧೯೯೦ರಲ್ಲಿ ಪ್ರಕಟಿತ ಯಕ್ಷಗಾನ ಕೃತಿ ಸಂಪುಟ

ಪ್ರಸಂಗ ಪ್ರತಿ ಕೊಟ್ಟವರು: ಗಣಪತಿ ಭಟ್ ನೆಲ್ಯಾಡಿ

ಪ್ರಸಂಗ ಪ್ರತಿ ಒದಗಣೆಗೆ ಸಹಕಾರ: ಗಣಪತಿ ಭಟ್ ನೆಲ್ಯಾಡಿ

ಅಂತರಜಾಲ ಪ್ರತಿ ಬರವಣಿಗೆ: ಗಣಪತಿ ಭಟ್ ನೆಲ್ಯಾಡಿ

ಅಂತರಜಾಲ ಪ್ರತಿ ತಿದ್ದುಪಡಿ: ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ್ ಉಪ್ಪೂರ

ಅಂತರಜಾಲ ಪ್ರತಿ ಉತ್ಪಾದನೆ: ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ

ಅಂತರಜಾಲ ಪ್ರತಿ ಪ್ರಕಾಶನ: ರವಿ ಮಡೋಡಿ, ಡಾ. ಪ್ರದೀಪ ಸಾಮಗ, ನಟರಾಜ ಉಪಾಧ್ಯ